# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೋರಮಂಗಲ ಉಪ-ವಿಭಾಗದ, ಜಕ್ಕಸಂದ್ರ ವಾರ್ಡ್ ಸಂಖ್ಯೆ-173 ದಿನಾಂಕ: 05-12-2020 ರಂದು ಡಿಸೆಂಬರ್-2020 ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಸಂಜೀವ್‌ಕುಮಾರ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173ರ ರವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಕಟ್ಟಡ, ಉದ್ಯಾನವನ ಹತ್ತಿರ, ಹೆಚ್.ಎಸ್.ಆರ್. 5ನೇ ಸೆಕ್ಟರ್, ಜಕ್ಕಸಂದ್ರ, (ಜಕ್ಕಸಂದ್ರ ವಾರ್ಡ್ ಕಛೇರಿ, ಬಿ.ಬಿ.ಎಂ.ಪಿ) ಬೆಂಗಳೂರು ದಿನಾಂಕ: 05.12.2020 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:-**

1. ಶ್ರೀ ಎಲ್.ವಿ. ಹೆನ್ರಿ, ಅಧ್ಯಕ್ಷರು, ಟೀಚರ್ಸ್ ಕಾಲೋನಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ.
2. ಶ್ರೀ ಆಚಾರ್ಯ, ಅಧ್ಯಕ್ಷರು, ಹೆಚ್.ಎಸ್.ಆರ್. 5ನೇ ಸೆಕ್ಟರ್ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ.
3. ಶ್ರೀ ಪೊನ್ನಪ್ಪ, ಉಪಾಧ್ಯಾಕ್ಷರು, ಹೆಚ್.ಎಸ್.ಆರ್. 5ನೇ ಸೆಕ್ಟರ್ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ.
4. ಶ್ರೀ ಜಿ.ಎಸ್. ಹೊಳ್ಳ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ.

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-173 ಜಕ್ಕಸಂದ್ರ
2. ಶ್ರೀ ವಿನಯ್ ಕೆ.ಎಸ್. ಸಹಾಯಕ ಅಭಿಯಂತರರು, ಬೆಸ್ಕಾಂ, ಹೆಚ್.ಎಸ್.ಆರ್ ಲೇಔಟ್
3. ಶ್ರೀ ನವೀನ್ ಕುಮಾರ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
4. ಶ್ರೀ ಅರವಿಂದ .ಆರ್, ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಸಂಜೀವಕುಮಾರ್, ಘನತ್ಯಾಜ್ಯ ಮೇಲ್ವಿಚಾರಕರು.
6. ಶ್ರೀ ಮಂಜುನಾಥ್ .ಡಿ ವಾರ್ಡ್ ಮಾರ್ಷಲ್

* * * * *

ಶ್ರೀ ಸಂಜೀವ್‌ಕುಮಾರ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಶ್ರೀ ಪ್ರದೀಪ್ ಕುಮಾರ್ .ಆರ್, ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ ರವರು ಮೊದಲಿಗೆ ದಿನಾಂಕ:21.11.2020 ರ ಸಭೆಯ ನಡವಳಿಗಳನ್ನು ಸಭೆಯ ಮುಂದೆ ಮಂಡಿಸಿದರು.

ಶ್ರೀ ಪೊನ್ನಪ್ಪ, ಹೆಚ್.ಎಸ್.ಆರ್. 5ನೇ ಸೆಕ್ಟರ್ ಬಡಾವಣೆಯ ನಿವಾಸಿಗಳು ಮಾತನಾಡಿ, ಕಸ ವಿಂಗಡಣೆ ಮಾಡದೆ ಕಸವನ್ನು ಹಾಕುವ ಕಟ್ಟಡದಲ್ಲಿ ವಾಸವಾಗಿರುವ ಬಾಡಿಗೆದಾರರಿಗೆ ಹಾಲಿ ಬಿ.ಬಿ.ಎಂ.ಪಿ ವತಿಯಿಂದ ದಂಡವನ್ನು ವಿಧಿಸಲಾಗುತ್ತಿದೆ. ಕಸ ವಿಂಗಡಣೆಗಾಗಿ ಇನ್ನೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಒಂದು ವೇಳೆ ಬಾಡಿಗೆದಾರರು ಕಸವಿಂಗಡಣೆ ಮಾಡದಿದ್ದರೆ, ಮಾಲೀಕರಿಗೂ ಸಹ ದಂಡ ವಿಧಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯ ಗಮನಕ್ಕೆ ತಿಳಿಸಿದರು.



Scanned by CamScanner

ಶ್ರೀ ಪೊನ್ನಪ್ಪ, ಹೆಚ್.ಎಸ್.ಆರ್. 5ನೇ ಸೆಕ್ಟರ್ ಬಡಾವಣೆಯ ನಿವಾಸಿಗಳು ಮಾತನಾಡಿ, ಒಣ ಕಸ ಸಂಗ್ರಹಣೆ ಸಮಯದಲ್ಲಿ ಬೆಡ್‌ಗಳು ಮತ್ತು ಥರ್ಮಾಕೋಲ್‌ಗಳನ್ನು ಸಂಗ್ರಹಣೆ ಮಾಡದೇ ಇರುವುದರಿಂದ, ಅವುಗಳನ್ನು ರಸ್ತೆಯ ಬದಿಗಳಲ್ಲಿ ಬಿಸಾಡುತ್ತಿರುತ್ತಾರೆ. ಆದುದರಿಂದ ಬೆಡ್‌ಗಳು ಮತ್ತು ಥರ್ಮಾಕೋಲ್‌ಗಳ ಸಂಗ್ರಹಣೆಗಾಗಿ ವಾರಕ್ಕೊಂದು ದಿನ ಒಣ ಕಸ ಜೊತೆ ಸಂಗ್ರಹಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀ ನಾರಾಯಣ್ ರವರು ಮಾತನಾಡಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಅರಣ್ಯ ಇಲಾಖೆ ವತಿಯಿಂದ 14ನೇ ಮುಖ್ಯರಸ್ತೆಯಲ್ಲಿ ಭೂಮಿಯನ್ನು ಆಳವಾಗಿ ಅಗೆದು ಗಿಡಗಳನ್ನು ನೆಡದೆ, ಭೂಮಿಯ ಮೇಲ್ಮೈ ಗಿಡಗಳನ್ನು ನೆಟ್ಟಿರುವುದರಿಂದ, ಗಿಡಗಳು ಬೆಳೆದು ಮರವಾದಾಗ ಬೇರುಗಳು ಆಳವಾಗಿ ಬೇರೂರದೆ ಮರಗಳು ಉರುಳುವ ಸಂದರ್ಭ ಬರಬಹುದಾಗಿರುವುದರಿಂದ ಮುಂದೆ ಗಿಡಗಳನ್ನು ನೆಡುವಾಗ ಆಳವಾಗಿ ಗುಂಡಿಗಳನ್ನು ತೆಗೆದು ನೆಡಬೇಕೆಂದು ಸಲಹೆ ನೀಡಿದರು.

ಶ್ರೀ ಶ್ಯಾಮ್‌ಗೌಡ ರವರು ಮಾತನಾಡಿ, ಟೀಚರ್ಸ್ ಕಾಲೋನಿ, ಕಾರ್ಮೆಲ್ ಸ್ಕೂಲ್ ಪಕ್ಕದಲ್ಲಿರುವ ಬಿ.ಬಿ.ಎಂ.ಪಿ. ಆಟದ ಮೈದಾನದಲ್ಲಿ ಕೋವಿಡ್–19 ಗೆ ಬಳಸುವ ಆಂಬ್ಯೂಲೆನ್ಸ್ ವಾಹನಗಳನ್ನು ಮತ್ತು ನೀರಿನ ಟ್ಯಾಂಕರ್‌ನ್ನು ನಿಲ್ಲಿಸಿದ್ದು, ಮಕ್ಕಳಿಗೆ ಆಟವಾಡಲು ತೊಂದರೆಯಾಗುತ್ತಿರುವುದರಿಂದ ಈ ಬಗ್ಗೆ ಕ್ರಮ ಕೈಗೊಳ್ಳಲು ಸಭೆಗೆ ತಿಳಿಸಿದರು ಮತ್ತು ಬೆಸ್ಕಾಂ ಕೇಬಲ್‌ಗಳು ನೇತಾಡುತ್ತಿದ್ದು, ಈ ಬಗ್ಗೆ ಎಚ್ಚರವಹಿಸಲು ಬೆಸ್ಕಾಂ ರವರಿಗೆ ತಿಳಿಸಿದರು.

ಶ್ರೀ ಪೊನ್ನಪ್ಪ, ಹೆಚ್.ಎಸ್.ಆರ್. 5ನೇ ಸೆಕ್ಟರ್ ಬಡಾವಣೆಯ ನಿವಾಸಿಗಳು ಮಾತನಾಡಿ, 14ನೇ ಮುಖ್ಯರಸ್ತೆಯ ಸೇತುವೆ ಬಳಿ ಬೃಹತ್ ನೀರುಗಾಲುವೆ ವತಿಯಿಂದ ನಿರ್ಮಿಸಿರುವ ಚರಂಡಿಯ ಹೂಳೆತ್ತುವ ಕಾಮಗಾರಿಯನ್ನು ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಲು ಸಭೆಯ ಗಮನಕ್ಕೆ ಸೂಚಿಸಿದರು. ಮುಂದುವರೆದು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಬಿಲ್‌ಗಳು ಎರಡು ತಿಂಗಳೂ ವಿಳಂಬವಾಗುತ್ತಿರುವ ಬಗ್ಗೆ ಕ್ರಮ ವಹಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಂಜಿನಿಯರ್ ರವರ ಗಮನಕ್ಕೆ ತಂದರು.

ಶ್ರೀ ಗಣೇಶ್ ರವರು ಮಾತನಾಡಿ, ಮಾರ್ಷಲ್‌ಗಳು ಸ್ಮಶಾನದ ಬಳಿ ಮತ್ತು ಹೈಗೇಟ್ ಮುಂಭಾಗ ಮತ್ತು ಟೀಚರ್ಸ್ ಕಾಲೋನಿ ಸರ್ವೀಸ್ ರಸ್ತೆಯಲ್ಲಿ ಸ್ಥಳದಲ್ಲಿಯೇ ದಂಡ ವಿಧಿಸಿ, ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಲು ಕ್ರಮವಹಿಸಲು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ವ್ಯಾಪಾಕವಾಗಿ ಗಸ್ತು ನಿರ್ವಹಿಸಲು ಸೂಚಿಸಿದರು.

ಶ್ರೀ ನಾರಾಯಣ್ ರವರು ಮಾತನಾಡಿ, 13ನೇ 'ಬಿ' ಅಡ್ಡರಸ್ತೆಯಲ್ಲಿ ಹಾಲಿ ಬೋರ್‌ವೆಲ್ ಇದ್ದು, ಕೊಳವೆ ಮಾರ್ಗವನ್ನು ಅಳವಡಿಸಿದಲ್ಲಿ, ನಿವಾಸಿಗಳಿಗೆ ಯಾವುದೇ ತೊಂದರೆಯಾಗುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಶ್ರೀಮತಿ ವೇದಮ್ಮ ನವರು ನಿವಾಸಿಗಳು ವೆಂಕಟಾಪುರ ಮಾತನಾಡಿ, ಜಕ್ಕಸಂದ್ರದ ವೆಂಕಟಾಪುರ 7ನೇ 'ಎ', 'ಬಿ' ಮತ್ತು 'ಸಿ' ಅಡ್ಡರಸ್ತೆಗಳಲ್ಲಿ ಒಳಚರಂಡಿ ಮಾರ್ಗವನ್ನು ಅಳವಡಿಸುವ ಕಾಮಗಾರಿ ಬಾಕಿ ಉಳಿದಿದ್ದು, ಕೂಡಲೇ ಪ್ರಾರಂಭಿಸಲು ಸಭೆಯ ಗಮನಕ್ಕೆ ತಂದರು. ಇದಕ್ಕೆ ಉತ್ತರಿಸಿದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಯ ಸಹಾಯಕ ಇಂಜಿನಿಯರ್ ಆದ ಶ್ರೀ ನವೀನ್ ಕುಮಾರ್ ರವರು ಈ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅನುಮೋದನೆಗೊಂಡ ನಂತರ ತುರ್ತಾಗಿ ಕಾಮಗಾರಿಯನ್ನು ನಿರ್ವಹಿಸುವುದಾಗಿ, ಸಭೆಯ ಗಮನಕ್ಕೆ ತಂದರು.



Scanned by CamScanner

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಸದಸ್ಯ ಕಾರ್ಯದರ್ಶಿ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಮುಂದಿನ ಸಭೆಯಲ್ಲಿ ಅನುಷ್ಠಾನಗೊಳಿಸಿರುವ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

05/12

(ಶ್ರೀ. ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು.
ವಾರ್ಡ್–173 ಜಕ್ಕಸಂದ್ರ

05-12-2020

(ಶ್ರೀ ಸಂಜೀವಕುಮಾರ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್–173 ಜಕ್ಕಸಂದ್ರ



Scanned by CamScanner




Scanned by CamScanner



Scanned by CamScanner




Scanned by CamScanner